ಅನಾದರ ತೋರಿಸುತ್ತಿಲ್ಲ. ಅವರು ನಮ್ಮ ಜೊತೆಗೆ ಗೌರವಾನ್ವಿತ ಸಚಿವರಾಗಿದ್ದವರು. ಅವರ ಬಗ್ಗೆ ಸಂಪೂರ್ಣವಾದ ಗೌರವವಿದೆ.

ಶ್ರೀ ಟಿ.ಬಿ.ಜಯಚಂದ್ರ:– independent or dependent?

ಶ್ರೀ ಎಸ್.ಸುರೇಶ್ ಕುಮಾರ್:– It depends upon the interpretation. ಆದರೆ ವಾಸ್ತವಾಂಶ ಏನೆಂದರೆ, ಕೊನೆ ಪ್ಯಾರಾದ ಉತ್ತರದಲ್ಲಿ ಸ್ಪಷ್ಟಪಡಿಸಿದ್ದೇವೆ. ಹೇಮಾವತಿ ಯೋಜನೆ ಅಣೆಕಟ್ಟೆಯಿಂದ ಪ್ರತಿ ಸಾಲಿನಲ್ಲಿ ಜುಲೈ/ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ನೀರನ್ನು ನಾಲೆಗಳಲ್ಲಿ ಹರಿಸಲಾಗುತ್ತದೆ. ಈ ಸಾಲಿನಲ್ಲಿ ಡಿಸೆಂಬರ್‌ನಿಂದ ಮುಂದಕ್ಕೆ ನಾಲೆಯಲ್ಲಿ ನೀರು ಹರಿಸುವುದನ್ನು ನಿಲ್ಲಿಸಿದ್ದು, ಪ್ರಸ್ತುತ ಹೇಮಾವತಿ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹ ಅತಿ ಕಡಿಮೆ ಇರುತ್ತದೆ. ಈ ಕಾರಣ, ತುಮಕೂರು ಶಾಖಾ ನಾಲೆಯಲ್ಲಿ ನೀರನ್ನು ಹರಿಸಲು ಸಾಧ್ಯವಿಲ್ಲದೇ ಇರುವುದರಿಂದ, ಹೊನ್ನವಳ್ಳಿ ಏತ ನೀರಾವರಿ ಯೋಜನೆಯಿಂದ ಬಲ್ಲಾಳಸಮುದ್ರ ಕೆರೆಗೆ ನೀರನ್ನು ಹರಿಸಲು ಸಾಧ್ಯವಾಗುವುದಿಲ್ಲ. ಈ ವರ್ಷದ ಪರಿಸ್ಥಿತಿ ಈ ರೀತಿಯಿದೆ. ಗೂಳಿಹಟ್ಟಿ ಶೇಖರ್‌ರವರಿಗೂ ಪರಿಸ್ಥಿತಿಯ ಅರಿವಿದೆ. ಆದರೆ ಅವರು ಹೇಳುತ್ತಿರುವುದೂ ಕೂಡ ಸತ್ಯವಿದೆ. ಹೊಸದುರ್ಗ ನಗರಕ್ಕೆ, ಪಟ್ಟಣಕ್ಕೆ ನೀರಿನ ಸಮಸ್ಯೆ ತುಂಬಾ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಇನ್ನೂ ಏನಾದರೂ ಮಾಡಬಹುದೇ ಎಂದು ಪರಿಶೀಲಿಸುತ್ತೇವೆ.

ಅಧ್ಯಕ್ಷರು:– ಆಯಿತು. ವಿದ್ಯುತ್ ಸಂಪರ್ಕದ ಚರ್ಚೆ ಸೋಮವಾರ ಇದೆ. ಆಗ ಮಾತನಾಡಿ.

ಶ್ರೀ ಗೂಳಿಹಟ್ಟಿ ಡಿ.ಶೇಖರ್:– ಮಾನ್ಯ ಅಧ್ಯಕ್ಷರೆ, ಕರೆಂಟ್, ಕಳೆದ 15 ದಿವಸಗಳಿಂದ 2 ಗಂಟೆ, ಒಂದೂವರೆ ಗಂಟೆಯೂ ಕೊಡುತ್ತಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:– ಸೋಮವಾರ ಅರ್ಧ ಗಂಟೆ ಚರ್ಚೆಯಲ್ಲಿ ಮಾಡನಾಡಿ.

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆ ಸೋಮವಾರವಿದೆ. ಆಗ ಮಾತನಾಡಿ. ಶ್ರೀ ಗೋಪಾಲ್ ಭಂಡಾರಿ.

6. ವಿಷಯ: ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಸರ್ವೆ ನಂ.105ನ್ನು ಅರಣ್ಯ ಇಲಾಖೆ ಅರಣ್ಯ ಎಂದು ಕಂದಾಯ ಇಲಾಖೆಗೆ ತಪ್ಪಾಗಿ ಪತ್ರ ಬರೆದಿರುವ ಬಗ್ಗೆ.

ಶ್ರೀ ಹೆಚ್.ಗೋಪಾಲಭಂಡಾರಿ(ಕಾರ್ಕಳ):– ಮಾನ್ಯ ಅಧ್ಯಕ್ಷರೆ, ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಸರ್ವೆ ನಂ. 105ನ್ನು ಅರಣ್ಯ ಇಲಾಖೆ ಅರಣ್ಯ ಎಂದು ಕಂದಾಯ ಇಲಾಖೆಗೆ ತಪ್ಪಾಗಿ ಪತ್ರ ಬರೆದಿರುವ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದ ಸ.ನಂ:105–1ರಲ್ಲಿ ತಲಾ 0.05 ಎಕ್ರೆಯಂತೆ 244 ಆಶ್ರಯ ಫಲಾನುಭವಿಗಳಿಗೆ ತಹಶೀಲ್ದಾರರು ಕಾರ್ಕಳ ಇವರು ಮನೆನಿವೇಶನ ಮಂಜೂರು ಮಾಡಿದ್ದು, ಗ್ರಾಮದಲ್ಲಿ ಮನೆ ನಿವೇಶನ ಮಂಜೂರಾತಿಗೆ ಯೋಗ್ಯ ಸರಕಾರಿ ಜಮೀನು ಲಭ್ಯವಿಲ್ಲದ ಪ್ರಯುಕ್ತ ಪಹಣಿಯಂತೆ ಈ ಜಮೀನು ಸರಕಾರಿ ಅನಾಧೀನ ಸ್ಥಳವಾಗಿರುವುದರಿಂದ ತಹಶೀಲ್ದಾರರು ಕಾರ್ಕಳ ಇವರು ಡಿಸೆಂಬರ್–2003 ಹಾಗೂ ಫೆಬ್ರವರಿ–2004 ರಲ್ಲಿ ಮನೆ ನಿವೇಶನ ಮಂಜೂರು ಮಾಡಿರುತ್ತಾರೆ.

ಸದ್ರಿ ಜಮೀನಿನಲ್ಲಿ ಮರಗಳು ಇರುವ ಪ್ರಯುಕ್ತ ಕಾನೂನಿನಂತೆ ಅವುಗಳ ವಿಲೇವಾರಿಗಾಗಿ ವಲಯ ಅರಣ್ಯಾಧಿಕಾರಿ, ಸೋಮೇಶ್ವರ ಇವರಿಗೆ ತಹಶೀಲ್ದಾರರು ಪತ್ರ ಬರೆಯಲಾಗಿ, ಸದ್ರಿಯವರು ತಮ್ಮ ಪತ್ರ ಸಂ: ಕಸಂ.ಚಾರ 05–061228 ದಿನಾಂಕ:3–08–2005 ರಂತೆ ಪ್ರಸ್ತಾವಿತ ಮನೆ ನಿವೇಶನ ನೀಡಿದ ಸರಕಾರಿ ಜಮೀನು ಸೋಮೇಶ್ವರ ವನ್ಯಜೀವಿ ವಲಯಕ್ಕೆ ಸೇರಿದ ಬ್ಲಾಕ್ ಆಗಿದ್ದು, ಸದ್ರಿ ಸ್ಥಳವನ್ನು ಅರಣ್ಯೇತರ ಚಟುವಟಿಕೆಗೆ ಬಳಸಿಕೊಳ್ಳಲು ರಾಷ್ಟ್ರೀಯ ವನ್ಯಜೀವಿ ಸಮಿತಿಯ ಪೂರ್ವಾನುಮತಿ ಬೇಕಾಗಿರುತ್ತದೆ ಎಂದೂ, ಅಲ್ಲದೆ ಕರ್ನಾಟಕ ಅರಣ್ಯ ಕಾನೂನು 1969 ನಿಯಮ 41ಕ್ಕೆ ವಿರುದ್ಧವಾಗಿರುತ್ತದೆ ಹಾಗೂ ಅರಣ್ಯ ಸಂರಕ್ಷಣಾ ಕಾಯಿದೆ 1980 ರ ನಿಯಮ 2 ರಂತೆ ಕೇಂದ್ರ ಸರಕಾರದ ಪೂರ್ವಾನುಮತಿ ಬೇಕಾಗಿರುವುದಾಗಿ ತಿಳಿಸಿ ಮನೆನಿವೇಶನ ಮಂಜೂರಾತಿಗೆ ಆಕ್ಷೇಪಣೆ ನೀಡಿರುತ್ತಾರೆ.

ಪ್ರಸ್ತಾವಿತ ಜಮೀನು ಅರಣ್ಯ ಜಮೀನೆಂದು ನಿವೇಶನ ಮಂಜೂರಾತಿಯನ್ನು ರದ್ದುಪಡಿಸುವ ಬಗ್ಗೆ ಕಾರ್ಕಳ ತಹಶೀಲ್ದಾರರು ಸಹಾಯಕ ಕಮೀಷನರ್‌ರವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಸಹಾಯಕ ಕಮೀಷನರ್‌ರವರು

ತಮ್ಮ ಪತ್ರ ಸಂ: ಸಿಡಿಸ್. ಎಲ್ಎನ್‌ಡಿ. 94 ಸಿ ಸಿಆರ್. 2/2005-06 ದಿನಾಂಕ: 7-11-2005 ರಂತೆ ನಿವೇಶನ ಮಂಜೂರಾತಿ ರದ್ದುಪಡಿಸಲು ನಿರ್ದೇಶಿಸಿರುತ್ತಾರೆ. ಹಾಗೂ ಜಿಲ್ಲಾಧಿಕಾರಿಯವರು ತಮ್ಮ ಪತ್ರ ಎಲ್ಎನ್‌ಡಿ.ಎಚ್ಎಸ್.30/05-06 ದಿನಾಂಕ: 23-01-2006 ರಂತೆ ನಿವೇಶನ ಮಂಜೂರಾತಿ ರದ್ದುಪಡಿಸಲು ಸೂಚಿಸಿರುತ್ತಾರೆ. ಈ ಬಗ್ಗೆ ಮಂಜೂರಾತಿದಾರರಿಗೆ ನಿವೇಶನ ರದ್ದುಪಡಿಸುವ ಬಗ್ಗೆ ದಿನಾಂಕ: 9-10-2006 ರಲ್ಲಿ ನೋಟೀಸು ನೀಡಿ ವಿಚಾರಣೆ ನಡೆಸಿ ದಿನಾಂಕ: 26-10-2006 ರಂದು ತಹಶೀಲ್ದಾರರು ಮಂಜೂರಾತಿ ರದ್ದುಪಡಿಸಿರುತ್ತಾರೆ.

ಸದ್ರಿ ಮಂಜೂರಾತಿ ರದ್ದುಪಡಿಸಿದ ಆದೇಶದ ಮೇಲೆ ಮಂಜೂರಾತಿದಾರರಲ್ಲಿ ಶ್ರೀಮತಿ ಜಲಜ ಪೂಜಾರ್ತಿ ಮತ್ತಿತರರು ರಾಜ್ಯ ಸರಕಾರ, ಜಿಲ್ಲಾಧಿಕಾರಿ ಉಡುಪಿ, ಸಹಾಯಕ ಕಮೀಷನರು ಕುಂದಾಪುರ, ತಹಶೀಲ್ದಾರರು ಕಾರ್ಕಳ, ವಲಯ ಅರಣ್ಯಾಧಿಕಾರಿ ವನ್ಯಜೀವಿ ವಿಭಾಗ, ಸೋಮೇಶ್ವರ ಇವರನ್ನು ಪ್ರತಿವಾದಿಯನ್ನಾಗಿ ದಾಖಲಿಸಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿ.ಪಿ.ನಂ: 16509/2006 ದಾಖಲಿಸಿದ್ದು, ಸದ್ರಿ ರಿಟ್ ಪಿಟಿಶನ್‌ನಲ್ಲಿ ದಿನಾಂಕ: 10-06-2009ರಲ್ಲಿ ತೀರ್ಮಾನವಾಗಿದ್ದು, ರದ್ದುಪಡಿಸಿದ ಮನೆ ನಿವೇಶನ ಮರುಮಂಜೂರಾತಿಗೆ ಆದೇಶಿಸಲಾಗಿದೆ. ಸದ್ರಿ ರಿಟ್‌ಪಿಟಿಶನ್ ಆದೇಶದ ವಿರುದ್ಧ ಕಾನೂನುಕೋಶದ ಅಭಿಪ್ರಾಯದ ಮೇರೆಗೆ ಸರಕಾರ ರಿಟ್ ಅಪೀಲು ನಂ: 1772/2010 ರಂತೆ ದಾಖಲಿಸಿದ್ದು, ಪ್ರಸ್ತುತ ಈ ಅಪೀಲು ಬಾಕಿ ಇರುತ್ತದೆ.

ಈ ಮಧ್ಯೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: FEE.302.FWL.2011(-V) ದಿನಾಂಕ: 27-12-2011 ರಂತೆ ವನ್ಯಜೀವಿ ವಿಭಾಗದ ಪುನರ್ವಿಂಗಡನೆ ಮಾಡಲಾಗಿದ್ದು, ವಿಂಗಡಣೆ ಆದೇಶದಲ್ಲಿ ಚಾರಾ ಗ್ರಾಮದ ಸ.ನಂ: 105ರಲ್ಲಿ ಚಾರಾ ಬ್ಲಾಕನ್ನು ಕೈಬಿಟ್ಟು ಆದೇಶವಾಗಿರುತ್ತದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರು ಚಾರ ಬ್ಲಾಕನ್ನು ಈ ಅಧಿಸೂಚನೆಯಿಂದ ಕೈಬಿಟ್ಟು ಆದೇಶ ಮಾಡಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಕರಣವನ್ನು ಮಾನ್ಯ ಉಚ್ಚನ್ಯಾಯಾಲಯದಲ್ಲಿ ಮುಂದುವರೆಸುವ ಬಗ್ಗೆ ಅಥವಾ ಹಿಂಪಡೆಯುವ ಬಗ್ಗೆ ನಿರ್ದೇಶನ ಕೋರಿ

ಉಡುಪಿ ಜಿಲ್ಲಾಧಿಕಾರಿಗಳು ಸಲ್ಲಿಸಲಾದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಹೆಚ್.ಗೋಪಾಲ್ ಭಂಡಾರಿ(ಕಾರ್ಕಳ):– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಆಗ ನಾನು ಪ್ರಸ್ತಾಪ ಮಾಡಿದ್ದು, ಚಾರಾ ಗ್ರಾಮದ ಸರ್ವೆ ನಂ.105ರ ವಿಚಾರ. ಸರ್ವೆ ನಂ.105ರ ವಿಚಾರದಲ್ಲಿ ನಾನು ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಇಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ. ಈ ಉತ್ತರದಲ್ಲೇ ಸ್ಪಷ್ಟವಾಗಿದೆ. ವಾಸ್ತವಾಂಶ ಇದರಲ್ಲೇ ಇದೆ. ಅಲ್ಲಿ ಚಾರಾ ಗ್ರಾಮದಲ್ಲಿ ಕಂದಾಯ ಅಲ್ಲ ಅರಣ್ಯ ಎಂದು ವಾದ ಮಾಡಿದ್ದು ಅರಣ್ಯ ಇಲಾಖೆ. ಆಮೇಲೆ ಅರಣ್ಯ ಇಲಾಖೆ ಇದು ಅರಣ್ಯ ಅಲ್ಲ ಎಂದು 2011ರಲ್ಲಿ ಹೇಳಿದೆ. 2011ರಲ್ಲಿ ಅರಣ್ಯ ಅಲ್ಲ ಎಂದು ಹೇಳಿದರೂ ಕೂಡ ಕಂದಾಯ ಇಲಾಖೆ ಇನ್ನೂ appeal ಮೇಲ್ಮನವಿ ಮಾಡುತ್ತದೆ ಎಂದರೆ ಇದಕ್ಕಿಂತ ವಿಪರ್ಯಾಸ ಇವತ್ತು ಎಲ್ಲೂ ಇಲ್ಲ. ಕಂದಾಯ ಇಲಾಖೆ ತನ್ನ ಜಾಗವನ್ನು ತನ್ನದು ಎಂದು ಉಳಿಸಿಕೊಳ್ಳುವುದಕ್ಕೆ ಆಗದಿರುವಂಥ ಒಂದು ಮಟ್ಟಕ್ಕೆ ಬಂದಿದೆ ಎಂದರೆ ಇದು ಬಹುಶ: ನನಗೆ ಅನ್ನಿಸುತ್ತದೆ, ಅಲ್ಲಿ ಸುಮಾರು 10 ವರ್ಷಗಳಿಂದ 224 ಜನ ಫಲಾನುಭವಿಗಳು ಅತಂತ್ರರಾಗಿದ್ದಾರೆ. ಇಬ್ಬರು ಬಡ ಫಲಾನುಭವಿಗಳು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋದಾಗ ಇದು ಅರಣ್ಯ ಅಲ್ಲ ಎಂದು ಮಾನ್ಯ ಉಚ್ಚನ್ಯಾಯಾಲಯವೂ ಕೂಡ ಹೇಳಿದೆ. ಅರಣ್ಯ ಇಲಾಖೆಯೂ ಸಹ ಅರಣ್ಯ ಜಾಗ ಅಲ್ಲ ಎಂದು ಪ್ರಕಟಣೆ ಮಾಡಿದೆ. ಕಂದಾಯ ಇಲಾಖೆ ಏಕೆ ಮೇಲ್ಮನವಿ ಮಾಡಿದೆ? ಇಲ್ಲಿ ಉತ್ತರದ ಕೊನೆ ಪ್ಯಾರಾದಲ್ಲಿ ಇದೆ ಅಧ್ಯಕ್ಷರೆ, ಇದನ್ನು ಉಡುಪಿ ಜಿಲ್ಲಾಧಿಕಾರಿಗಳು ಈ ಮೇಲ್ಮನವಿಯನ್ನು ಮುಂದುವರೆಸಬೇಕೋ ಅಥವಾ ಬೇಡವೋ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಇದಕ್ಕೆ 2 ವರ್ಷ ಬೇಕೇ ಸ್ವಾಮಿ. ಕಂದಾಯ ಜಮೀನನ್ನು ಕಂದಾಯ ಎಂದು ಹೇಳುವುದಕ್ಕೂ ಕೂಡಾ ಈ ಸರ್ಕಾರ ಹಿಂದೆ–ಮುಂದೆ ನೋಡುತ್ತದೆಯೆನ್ನುವುದಾದರೆ, ಇದರ ಬಗ್ಗೆ ದಯವಿಟ್ಟು ಸರ್ಕಾರ ನನಗೆ ಸ್ಪಷ್ಟವಾದ ಉತ್ತರ ಕೊಡಬೇಕು. ಇದನ್ನು ಯಾವಾಗ ವಾಪಸ್ಸು ತೆಗೆದುಕೊಳ್ಳುತ್ತೀರಿ ಎನ್ನುವ ಉತ್ತರವನ್ನಾದರೂ ಹೇಳಬೇಕು.

ಶ್ರೀ ಎಸ್.ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಶ್ರೀ ಈಶ್ವರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳ

ಪರವಾಗಿ):- ಮಾನ್ಯ ಅಧ್ಯಕ್ಷರೆ, ಶ್ರೀ ಗೋಪಾಲ್ ಭಂಡಾರಿಯವರು ಈಗಾಗಲೇ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಮಾತನಾಡುತ್ತಿರುವಾಗಲೂ ಕೂಡಾ ಇದನ್ನು ಪ್ರಸ್ತಾಪ ಮಾಡಿದ್ದರು. ಇವತ್ತು ಬಹಳ ಸ್ಪಷ್ಟವಾದ ಉತ್ತರವನ್ನು, ಸರ್ಕಾರದ ನಿಲುವನ್ನು ನಾವು ತಿಳಿಸಿದ್ದೇವೆ. ಈ ಮಧ್ಯೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ: FEE.302,FWL2011(-V) ದಿನಾಂಕ:27.12.2011ರಂತೆ ವನ್ಯಜೀವಿ ವಿಭಾಗದ ಪುನರ್ವಿಂಗಡಣೆ ಮಾಡಲಾಗಿದ್ದು, ವಿಂಗಡಣೆ ಆದೇಶದಲ್ಲಿ ಚಾರಾ ಗ್ರಾಮದ ಸರ್ವೆ ನಂ.105ರಲ್ಲಿ ಚಾರಾ ಬ್ಲಾಕನ್ನು ಕೈಬಿಟ್ಟು ಆದೇಶವಾಗಿರುತ್ತದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರು ಚಾರಾ ಬ್ಲಾಕನ್ನು ಈ ಅಧಿಸೂಚನೆಯಿಂದ ಕೈಬಿಟ್ಟು ಆದೇಶ ಮಾಡಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಅವರು ಅಧಿಸೂಚನೆಯಿಂದ ಕೈಬಿಟ್ಟ ಮೇಲೆ ನನಗನ್ನಿಸುತ್ತದೆ ಮೇಲ್ಮನವಿ ಮುಂದುವರೆಸುವುದರಲ್ಲಿ ಅರ್ಥವಿಲ್ಲ. ಅದರ ಬಗ್ಗೆ ಸೂಕ್ತ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಗೋಪಾಲ್ ಭಂಡಾರಿ:- ಮೇಲ್ಮನವಿಯನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್.ಸುರೇಶ್‌ಕುಮಾರ್:- ಇಂದಿನ ದಿನವೇ ಶುಭ ದಿನವು. ಕುಳಿತುಕೊಳ್ಳಿ.

ಶ್ರೀ ಹೆಚ್.ಗೋಪಾಲ್ ಭಂಡಾರಿ:- ದಯವಿಟ್ಟು ಈಗಲೇ ಮೇಲ್ಮನವಿಯನ್ನು ತಕ್ಷಣ ಹಿಂತೆಗೆದುಕೊಳ್ಳುವ ಆದೇಶ ಕೊಡಿ. ಉತ್ತರ ಕೊಡಿ.

ಅಧ್ಯಕ್ಷರು:- ಈಗಲೇ ಮಾಡುತ್ತಾರೆ. ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಗೋಪಾಲ್ ಭಂಡಾರಿ:- ವಾಪಸ್ಸು ತೆಗೆದುಕೊಳ್ಳುವ ಬಗ್ಗೆ.

ಅಧ್ಯಕ್ಷರು:- ಈಗ ಸದನವನ್ನು ನಾಳೆ ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 7 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡಿತು)

(ಪುನ: ಸದನವು ದಿನಾಂಕ:08ನೇ ಫೆಬ್ರವರಿ 2013ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

ಬಿ.ಪಿ.ಎಲ್ ಪಡಿತರ ಚೀಟಿ ವಿತರಣೆ